

# ಮಂಗಳೂರು ಬೆಡಗಿಯ ಸಿನಿಕನಸು

■ ಪದ್ಮನಾಭ ಭಟ್

'ಎರಡು ರೊಮ್ಯಾಂಟಿಕ್ ಸಾಂಗ್, ನಾಲ್ಕು ಫೈಟ್, ಇದು ಕಮರ್ಷಿಯಲ್ ಸಿನಿಮಾಗಳ ಸೂತ್ರ. ಅದನ್ನು ನಿರಾಕರಿಸುವುದು ಕಷ್ಟ. ಆದರೆ ನಾವು ಅಷ್ಟಕ್ಕೇ ಸೀಮಿತರಾಗಬಾರದು. ಅವುಗಳನ್ನು ಮೀರಿಯೂ ನಮ್ಮ ಪ್ರತಿಭೆಯನ್ನು ಸಾಬೀತುಗೊಳಿಸಿಕೊಳ್ಳುವಂಥ ಪಾತ್ರಗಳಲ್ಲಿ ನಟಿಸಬೇಕು ಎನ್ನುವುದು ನನ್ನ ಆಸೆ. ನನ್ನ ಮೊದಲ ಸಿನಿಮಾದಿಂದಲೂ ಇದನ್ನೇ ಮನಸಲ್ಲಿಟ್ಟುಕೊಂಡು ಬಂದಿದ್ದೇನೆ' – ಹೀಗೆ ವಾಸ್ತವದ ಬೆಂಕಿಯಲ್ಲಿಯೇ ಮಹತ್ವಾಕಾಂಕ್ಷೆಯ ಗುಲಾಬಿ ಅರಳಿಸುವಂತೆ ಮಾತನಾಡುತ್ತಾರೆ ಅಕ್ಷತಾ ಶ್ರೀನಿವಾಸ್.

ಅಕ್ಷತಾ ಕಡಲತಡಿ ಮಂಗಳೂರಿನ ಹುಡುಗಿ. ಅಪ್ಪ ಬ್ಯಾಂಕ್ ಉದ್ಯೋಗಿಯಾಗಿದ್ದರಿಂದ ಹುಟ್ಟಿದೂರಿನಿಂದ ಎಲ್ಲೆಲ್ಲಿಯೋ ಅಲೆಯುತ್ತಲೇ ಇದ್ದವರು. ಆದರೆ ಆ ಅಲೆದಾಟ ಅವರ ತಾಯ್ನುಡಿಯೆಡೆಗಿನ ಪ್ರೇಮವನ್ನು ಚೂರೂ ಮುಕ್ಕಾಗಿಸಲಿಲ್ಲ.

ಸಾಮಾನ್ಯವಾಗಿ ಕಾಲೇಜು ದಿನಗಳಲ್ಲಿ ಬಣ್ಣದ ಲೋಕದ ಕಡೆಗೆ ಮೋಹಿತರಾಗಿ ಸಿನಿಮಾರಂಗ ಸೇರುವುದು ವಾಡಿಕೆ. ಆದರೆ ಅಕ್ಷತಾ ಈ ವಿಷಯದಲ್ಲಿ ಉಲ್ಟಾ. ನಾಲ್ಕನೇ ತರಗತಿಯಿದ್ದಾಗಲೇ ನಾನು ಸಿನಿಮಾ ನಟಿಯಾಗಬೇಕು ಎಂದು ಕನಸು ಕಂಡವರು ಅವರು. ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಗಿಸಿ ಬಂದ ಮಾರನೇ ದಿನ ಮನೆಯಲ್ಲಿ ಅಪ್ಪ – ಅಮ್ಮನ ಎದುರು ನಿಂತು 'ನಾನು ಮಾಡೆಲಿಂಗ್ ಮಾಡ್ತೀನಿ' ಎಂದು ತಮ್ಮ ಬದುಕಿನ ದಾರಿಯ ಸೂಚನೆ ಕೊಟ್ಟವರು. ಆದರೆ 'ಶಿಕ್ಷಣ ಮುಗಿಸಿದ ಮೇಲೆ ನಿನಗಿಷ್ಟ ಬಂದ ಕ್ಷೇತ್ರವನ್ನು ಆರಿಸಿಕೊ' ಎಂಬ ಹಿರಿಯರ ಮಾತಿಗೆ ಕಿವಿಗೊಟ್ಟು ಎಂಜಿನಿಯರಿಂಗ್ ಮಾಡಬೇಕಾಯ್ತು. ಈ ಸಮಯದಲ್ಲಿಯೇ ಮಾಡೆಲಿಂಗ್ ಕ್ಷೇತ್ರದ ಸಹವಾಸವೂ ದೊರೆಯಿತು.

ಮೊದಲಿಗೆ ಮನೆಯಲ್ಲಿ ಮಗಳು ನಟಿಯಾಗುವುದು ಅಷ್ಟೊಂದು ಇಷ್ಟವಿರಲಿಲ್ಲ. ಸಂಬಂಧಿಕರೆಲ್ಲ ಏನಂದುಕೊಳ್ತಾರೋ ಎಂಬ ಅಂಜಿಕೆಗೆ ಒಳದಾರಿಯಾಗಿ ಕಂಡಿದ್ದು ತಮಿಳು ಸಿನಿಮಾವೊಂದರ ಆಡಿಷನ್ ಕರೆ. ತಮಿಳಿನಲ್ಲಿ ನಟಿಸಿದರೆ ಆಡಿಕೊಳ್ಳುವವರಿಗೆ ಪತ್ತೆಯಾಗುವುದಿಲ್ಲ ಎಂದು ಚೆನ್ನೈಗೆ ಹೋಗಿ ಆಡಿಷನ್ ಕೊಟ್ಟರು. ಆಯ್ಕೆಯೂ ಆದರು. ಹೀಗೆ ನೆರೆ ಭಾಷೆಯ 'ನಂಬಗಲ್ ನರ್ಪಾಣಿ ಮಂದ್ರಮ್' ಸಿನಿಮಾ ಮೂಲಕ ಮಿನುಗುಲೋಕದೊಳಗೆ ಬಲಗಾಲಿಟ್ಟ ಈ ಕನ್ನಡದ ಹುಡುಗಿ ನಂತರ ನಟಿಸಿದ್ದು ತೆಲುಗು ಸಿನಿಮಾದಲ್ಲಿ. ಅಷ್ಟರಲ್ಲಿ ಆಡಿಕೊಳ್ಳುವ ಬಾಯಿಗಳೇ ಹೊಗಳಲಾರಂಭಿಸಿದ್ದವು. ಆಗಲೇ ಅವರಿಗೆ ಕನ್ನಡದ 'ಪರಸಂಗ' ಸಿನಿಮಾದಲ್ಲಿ ನಾಯಕಿಯಾಗಿ ನಟಿಸುವ ಅವಕಾಶವೂ ಸಿಕ್ಕಿತ್ತು.

'ಪರಸಂಗ' ಕಥೆಯೇ ತುಂಬ ಚೆನ್ನಾಗಿದೆ. ಅದರಲ್ಲಿ ನಾನು ಸಿಟಿಯಿಂದ ಹಳ್ಳಿಗೆ ಹೋಗಿ ಪರದಾಡುವ ಹುಡುಗಿಯಾಗಿ ನಟಿಸಿದ್ದೇನೆ. ಕನ್ನಡದ ಮೊದಲ ಸಿನಿಮಾದಲ್ಲಿಯೇ ಅಷ್ಟೊಂದು ಗಟ್ಟಿಯಾದ ಪಾತ್ರ ಸಿಕ್ಕಿದ್ದರ ಬಗ್ಗೆ ನನಗೆ ಖುಷಿಯಿದೆ' ಎಂದು ಹೇಳಿಕೊಳ್ಳುತ್ತಾರೆ ಅವರು.

ಈಗ ಅಕ್ಷತಾ ಮುಖ್ಯಪಾತ್ರದಲ್ಲಿ ನಟಿಸಿರುವ 'ಶಿವಾರ್ಜುನ' ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಈ ಚಿತ್ರದ ಕುರಿತೂ ಅವರಿಗೆ ಸಾಕಷ್ಟು ಖುಷಿಯಿದೆ. 'ನಾನು ಮೊದಲಿನಿಂದಲೂ ಸ್ಟ್ರಾಂಗ್ ಅನಿಸಿದ ಪಾತ್ರಗಳನ್ನೇ ಒಪ್ಪಿಕೊಂಡು ಬಂದವಳು. 'ಶಿವಾರ್ಜುನ'ದಲ್ಲಿಯೂ ಅಂಥದ್ದೇ ಪಾತ್ರ. ಚಿರಂಜೀವಿ ಸರ್ಜಾ ಮತ್ತು ಸಾಧುಕೋಕಿಲ ಅವರ ಜೊತೆಗೆ ನನ್ನ ಪಾತ್ರದ ಟ್ರ್ಯಾಕ್ ಇದೆ. ಸಖತ್ ಕಾಮಿಡಿ ಇರುವಂಥ ಸಿನಿಮಾ ಇದು' ಎಂದು ಸಿನಿಮಾ ಮತ್ತು ಪಾತ್ರದ ಕುರಿತು ವಿವರಿಸುತ್ತಾರೆ.

"ಹಿಂದೆ ಕೆಲವೇ ನಟಿಯರಿದ್ದರು. ಅವರಿಗೆ